**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ,**
**ಕೆ.ಆರ್.ನಗರ.**

**Crl.Misc No.**479/2023

**PW** : 1

**ದಿನಾಂಕಃ 06-12-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| **ಸಾಕ್ಷಿಯ ಹೆಸರುಃ** | **ಶಿಲ್ಪಶ್ರೀ** |
| **ಗಂಡನ ಹೆಸರುಃ** | **ಶಿವು** |
| **ವಯಸ್ಸುಃ** | **30 ವರ್ಷ** |
| **ಉದ್ಯೋಗಃ** | **ಗಾರ್ಮೆಂಟ್ ಫ್ಯಾಕ್ಟರಿಯಲ್ಲಿ ಕೆಲಸ** |
| **ವಾಸ ಸ್ಥಳಃ** | **ಮಿರ್ಲೆ ಗ್ರಾಮ, ಸಾಲಿಗ್ರಾಮ** |

**ಮುಖ್ಯ ವಿಚಾರಣೆ ಅರ್ಜಿದಾರರ ಪರವಾಗಿಃ ಶ್ರೀ.ಬಿ.ಎಸ್.ಕೆ. ವಕೀಲರಿಂದಃ**

1. ದಿ. 10.06.2020 ರಂದು ನನ್ನ ತವರು ಮನೆಯಲ್ಲಿ ನನ್ನ ಮತ್ತು ಎದುರುದಾರನ ವಿವಾಹವು ಎರಡು ಕುಟುಂಬಗಳ ಮತ್ತು ಹಿರಿಯರ ಸಮಕ್ಷಮದಲ್ಲಿ ಹಿಂದೂ ಸಂಪ್ರದಾಯದಂತೆ ಆಗಿರುತ್ತದೆ. ಮದುವೆಯ ಕಾಲಕ್ಕೆ ನನ್ನ ತವರು ಮನೆಯವರು ಎದುರುದಾನಿಗೆ ಚಿನ್ನದ ಚೈನು, ಉಂಗುರ, ಬಟ್ಟೆ ವಾಚು ಹಾಗೂ 3 ಲಕ್ಷ ರೂಪಾಯಿಯನ್ನು ವರದಕ್ಷಿಣೆಯಾಗಿ ಕೊಟ್ಟಿರುತ್ತಾರೆ. ನನಗೆ 100 ಗ್ರಾಂ. ಚಿನ್ನವನ್ನು ಸಹ ನನ್ನ ತವರು ಮನೆಯವರು ಹಾಕಿರುತ್ತಾರೆ. 5 ಲಕ್ಷ ರೂಪಾಯಿ ಖರ್ಚು ಮಾಡಿ ನನ್ನ ತವರು ಮನೆಯವರು ನನ್ನ ಮತ್ತು ಎದುರುದಾರನ ವಿವಾಹವನ್ನು ಮಾಡಿಸಿರುತ್ತಾರೆ.

2. ಮದುವೆಯಾದ ನಂತರ ನಾನು ಮತ್ತು ಎದುರುದಾರ ಸುಮಾರು 2 ವರ್ಷಗಳ ಕಾಲ ಅನೋನ್ಯವಾಗಿ ದಾಂಪತ್ಯ ಜೀವನ ನಡೆಸಿರುತ್ತೇವೆ. ನನ್ನ ಮತ್ತು ಎದುರುದಾರನ ದಾಂಪತ್ಯ ಜೀವನದಿಂದ ನಮಗೆ 2 ನೇ ಅರ್ಜಿದಾರ ಜನಿಸಿರುತ್ತಾನೆ. ಅದಾದ ನಂತರದಲ್ಲಿ ಎದುರುದಾರ ನನಗೆ ಮಾನಸಿಕ ಮತ್ತು ದೈಹಿಕ ಹಿಂಸೆ ನೀಡಲಾರಂಭಿಸಿರುತ್ತಾರೆ ಹಾಗೂ ನೀನು ನನಗೆ ಇಷ್ಟವಿಲ್ಲ ಎಂದು ನನ್ನೊಂದಿಗೆ ಜಗಳ ಮಾಡಿ 2 ದಿನಗಳ ಕಾಲ ನನ್ನನ್ನು ಎದುರುದಾರ ಅವರ ಮನೆಯಲ್ಲಿ ಕೂಡಿ ಹಾಕಿರುತ್ತಾರೆ. ಎದುರುದಾರ ನನಗೆ ತುಂಬಾ ಮಾನಸಿಕ ಮತ್ತು ದೈಹಿಕ ಹಿಂಸೆ

ನೀಡಿರುತ್ತಾರೆ. 2 ನೇ ಅರ್ಜಿದಾರ ನನಗೆ ಹುಟ್ಟಿಲ್ಲ, ನಿನ್ನ ತಂದೆಗೆ ಹುಟ್ಟಿರುತ್ತಾನೆ ಎಂದು ಎದುರುದಾರ ನನಗೆ ನಿಂದಿಸಿರುತ್ತಾರೆ.

3. ಎದುರುದಾರ, ಅವರ ಅಣ್ಣ ಮತ್ತು ಅತ್ತಿಗೆ ಸೇರಿ ನನಗೆ ತುಂಬಾ ಮಾನಸಿಕ ಮತ್ತು ದೈಹಿಕ ಹಿಂಸೆ ನೀಡಿರುತ್ತಾರೆ. ತಮ್ಮ ಮನೆಯಲ್ಲಿ 2 ದಿನಗಳ ಕಾಲ ನನಗೆ ಊಟ ಕೊಡದೇ ಎದುರುದಾರ ಮನೆಗೆ ಬೀಗ ಹಾಕಿ ನನ್ನನ್ನು ಕೂಡಿ ಹಾಕಿರುತ್ತಾರೆ. ನಾನು ಕಿಟಕಿಯಿಂದ ಪಕ್ಕದ ಮನೆಯವರೊಂದಿಗೆ ಮೊಬೈಲ್ ತೆಗೆದು ನನ್ನ ತಂದೆಗೆ ಫೋನ್ ಮಾಡಿ ಎದುರುದಾರ ನನ್ನನ್ನು ಮನೆಯಲ್ಲಿ ಕೂಡಿ ಹಾಕಿರುವ ವಿಷಯ ತಿಳಿಸಿರುತ್ತೇನೆ. ನಂತರ ನನ್ನ ತಂದೆ ಪೋಲಿಸ್ ಠಾಣೆಗೆ ದೂರನ್ನು ನೀಡಿ ನನ್ನನ್ನು ಮನೆಯಿಂದ ಹೊರ ತಂದಿರುತ್ತಾರೆ.

4. ನನಗೆ ಮತ್ತು 2 ನೇ ಅರ್ಜಿದಾರನಿಗೆ ಎದುರುದಾರ ಯಾವುದೇ ಜೀವನಾಂಶವನ್ನು ಕೊಡುತ್ತಿರಲಿಲ್ಲ ಹಾಗೂ ನಮ್ಮನ್ನು ಸರಿಯಾಗಿ ನೋಡಿಕೊಳ್ಳುತ್ತಿರಲಿಲ್ಲ. ನಾನು ಬೇರೆ ದಾರಿ ಕಾಣದೇ ನನ್ನ ತವರು ಮನೆಗೆ ಹೋಗಿರುತ್ತೇನೆ. ಈಗ 3 ವರ್ಷಗಳಿಂದ ನಾನು ಮತ್ತು 2 ನೇ ಅರ್ಜಿದಾರ ನನ್ನ ತವರು ಮನೆಯಲ್ಲಿ ವಾಸವಿದ್ದೇವೆ. ನಾನು ಎದುರುದಾರನಿಗೆ ಫೋನ್ ಮೂಲಕ ಸಂಪರ್ಕಿಸಲು ಪ್ರಯತ್ನಪಟ್ಟರು ಸಹ ಎದುರುದಾರ ನನ್ನ ಫೋನ್ ತೆಗೆಯುತ್ತಿಲ್ಲ. ಕುಟುಂಬದ ಹಿರಿಯರು ನ್ಯಾಯ ಪಂಚಾಯಿತಿಕೆ ಮಾಡಿ ನನ್ನನ್ನು ಎದುರುದಾರನೊಂದಿಗೆ ಕಳು ಹಿಸಿದರು ಸಹ ಎದುರುದಾರ ನನ್ನನ್ನು ಸರಿಯಾಗಿ ನೋಡಿಕೊಂಡಿರುವುದಿಲ್ಲ.

5. ನಾನು ಸಾಲಿಗ್ರಾಮ ಪೋಲಿಸ್ ಠಾಣೆಗೆ ಮತ್ತು ಮಹಿಳಾ ಸಂಘಕ್ಕೆ ದೂರು ನೀಡಿದ್ದು, ಅಲ್ಲಿಯು ಸಹ ಎದುರುದಾರ ನನ್ನನ್ನು ತಮ್ಮ ಜೊತೆಗೆ ಕರೆದುಕೊಂಡು ಹೋಗಲು ನಿರಾಕರಿಸಿರುತ್ತಾರೆ. ನಾನು ಎದುರುದಾರಿನಿಗೆ ಫೋನ್ ಮಾಡಿ ನನ್ನನ್ನು ತಮ್ಮ ಜೊತೆಗೆ ಕರೆದುಕೊಂಡು ಹೋಗಲು ಎದುರುದಾರಿನಿಗೆ ಎಷ್ಟೇ ಕೇಳಿಕೊಂಡರು ಸಹ ಎದುರುದಾರ ನನ್ನನ್ನು ತಮ್ಮ ಜೊತೆಗೆ ಕರೆದುಕೊಂಡು ಹೋಗಿರುವುದಿಲ್ಲ. ನೀನು ನನ್ನ ಮೇಲೆ ಕೇಸು ಹಾಕಿದರು ಸಹ ನಾನು ನಿನ್ನನ್ನು ನನ್ನ ಜೊತೆ ಕರೆದುಕೊಂಡು ಹೋಗುವುದಿಲ್ಲ ಹಾಗೂ ನಿನಗೆ ನಾನು ಏನನ್ನು ಸಹ ಕೊಡುವುದಿಲ್ಲ ಎಂದು ಎದುರುದಾರ ಹೇಳಿರುತ್ತಾರೆ. 2 ನೇ ಅರ್ಜಿದಾರನೊಂದಿಗೂ ಸಹ ಎದುರುದಾರ ಮಾತನಾಡಲು ನಿರಾಕರಿಸಿರುತ್ತಾರೆ. ಕೆ ಆರ್ ನಗರದ ಮಾನ್ಯ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ನಾನು ಎದುರುದಾರನ ವಿರುದ್ಧ Restitution of conjugal rights ಕೋರಿ ಅರ್ಜಿಯನ್ನು ಸಲ್ಲಿಸಿದ್ದು, ಸದರಿ ನ್ಯಾಯಾಲಯವು 2 ನೇ ಅರ್ಜಿದಾರರನ್ನು ಮಾತನಾಡಿಸುವಂತೆ ಮತ್ತು 2 ನೇ ಅರ್ಜಿದಾರನಿಗೆ

ಊಟ ಕೊಡಿಸುವಂತೆ ಎದುರುದಾರಿನಿಗೆ ಹೇಳಿದರು ಸಹ ಎದುರುದಾರ 2 ನೇ ಅರ್ಜಿದಾರನ್ನು ಮಾತನಾಡಿಸಿರುವುದಿಲ್ಲ ಹಾಗೂ ಊಟವನ್ನು ಸಹ ಕೊಡಿಸಿರುವುದಿಲ್ಲ.

6. ನಾನು ಮೈಸೂರಿನ ಗಾರ್ವೆಂಟ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದು, ನನಗೆ ತಿಂಗಳಿಗೆ ಕೇವಲ 10,000/- ರೂಪಾಯಿ ಮಾತ್ರ ಸಂಬಳ ಬರುತ್ತದೆ. ನನ್ನ ಆದಾಯವು ನನ್ನ ಮತ್ತು 2 ನೇ ಅರ್ಜಿದಾರನ ಜೀವನ ನಿರ್ವಹಣೆಗೆ ಸಾಲುತ್ತಿಲ್ಲ. ನನಗೆ ಕ್ಯಾನ್ಸರ್ ಕಾಯಿಲೆ ಇದ್ದು, ನನ್ನ ಚಿಕಿತ್ಸೆಗೆ ನನ್ನ ತಂದೆಯವರು ಸಾಲ ಮಾಡಿ 80,000/- ರೂಪಾಯಿಯಷ್ಟು ಈಗಾಗಲೇ ಖರ್ಚು ಮಾಡಿರುತ್ತಾರೆ. ನಾನು ಅನಾರೋಗ್ಯದಿಂದ ಬಳಲುತ್ತಿದ್ದರು ಸಹ ನನ್ನನ್ನು ನೋಡಲು ಎದುರುದಾರ ಬಂದಿರುವುದಿಲ್ಲ. ನನಗೆ ನನ್ನನ್ನು ಮತ್ತು 2 ನೇ ಅರ್ಜಿದಾರನನ್ನು ಸಾಕುವ ಆರ್ಥಿಕ ಮತ್ತು ದೈಹಿಕ ಸಾಮರ್ಥ್ಯ ಇಲ್ಲ. ನಾನು ಕ್ಯಾನ್ಸರ್ ರೋಗಿ ಆಗಿರುವ ಕಾರಣ ಕೇವಲ ನನ್ನ ಚಿಕಿತ್ಸೆಗಾಗಿ ನನಗೆ ತಿಂಗಳಿಗೆ 20,000/- ರೂಪಾಯಿ ಖರ್ಚಾಗುತ್ತದೆ. ಅದಲ್ಲದೆ ನನ್ನ ಕ್ಯಾನ್ಸರ್ ರೋಗದಿಂದಾಗಿ ನನಗೆ ದುಡಿಯುವ ಸಾಮರ್ಥ್ಯವು ಸಹ ಇಲ್ಲ.

7. ಎದುರುದಾರನಿಗೆ 12 ಎಕರೆ ಜಮೀನು ಇದ್ದು, ಸದರಿ ಜಮೀನಿನಲ್ಲಿ ಶುಂಠಿ ಮತ್ತು ಹೊಗೆಸೋಪ್ಪು ಬೆಳೆಯುತ್ತಾರೆ. ಎದುರುದಾರನಿಗೆ ಬ್ಯಾರೆನ್ ಮನೆ ಮತ್ತು ಟ್ರಾಕ್ಟರ್ ಸಹ ಇದೆ. ಈ ಮೇಲೆ ಹೇಳಿದ ಮೂಲಗಳಿಂದ ಎದುರುದಾರನಿಗೆ ಒಂದು ವರ್ಷಕೆ 10 ಲಕ್ಷ ರೂಪಾಯಿ ಆದಾಯ ಬರುತ್ತದೆ. ಎದುರುದಾರನಿಗೆ ಒಳ್ಳೆಯ ಆದಾಯ ಇದ್ದರು ಸಹ ಎದುರುದಾರ ನನ್ನನ್ನು ಮತ್ತು 2 ನೇ ಅರ್ಜಿದಾರನನ್ನು ಸಾಕದೇ ನಿರ್ಲಕ್ಷಿಸಿರುತ್ತಾರೆ.

8. ನನ್ನ ತವರು ಮನೆಯವರು ಆರ್ಥಿಕವಾಗಿ ತೀರಾ ಬಡವಾಗಿರುತ್ತಾರೆ. ಈಗ 3 ವರ್ಷಗಳಿಂದ ನಾನು ಮತ್ತು 2 ನೇ ಅರ್ಜಿದಾರ ನನ್ನ ತವರು ಮನೆಯಲ್ಲಿ ವಾಸಮಾಡುತ್ತಿದ್ದೇವೆ. ನನ್ನ ತವರು ಮನೆಯವರಿಗೆ ನನ್ನನ್ನು ಮತ್ತು 2 ನೇ ಅರ್ಜಿದಾರನನ್ನು ಸಾಕುವ ಆರ್ಥಿಕ ಸಾಮರ್ಥ್ಯ ಇರುವುದಿಲ್ಲ.

9. ನಾನು ಮತ್ತು 2 ನೇ ಅರ್ಜಿಯದಾರ ಇಲ್ಲಿಯವರೆಗೆ ನನ್ನ ತವರು ಮನೆಯಲ್ಲಿ ಇರುತ್ತೇವೆ. ಇಂದಿನವರೆಗೂ ನಮ್ಮ ಜೀವನಾಂಶಕ್ಕಾಗಿ ಎದುರುದಾರ ಯಾವುದೇ ಖರ್ಚನ್ನು ನೀಡಿರುವುದಿಲ್ಲ. ಎದುರುದಾರನಿಗೆ ನಮ್ಮನ್ನು ಸಾಕುವಷ್ಟು ಆರ್ಥಿಕ ಹಾಗೂ ದೈಹಿಕ ಸಾಮರ್ಥ ಇರುತ್ತದೆ. ನಮ್ಮನ್ನು ಸಾಕುವ ಆರ್ಥಿಕ ಸಾಮರ್ಥ ಇದ್ದರು ಸಹ ಎದುರುದಾರನು ನಮ್ಮನ್ನು ನಿರ್ಲಕ್ಷಿಸಿರುತ್ತಾರೆ. ನಾನು ಮತ್ತು 2 ನೇ ಅರ್ಜಿಯದಾರ ನಮ್ಮ ಜೀವನಾಂಶಕ್ಕಾಗಿ

ಎದುರುದಾರನನ್ನೆ ಅವಲಂಭಿಸಿರುತ್ತೇನೆ. ನನ್ನ ಮತ್ತು 2 ನೇ ಅರ್ಜಿದಾರನ ಜೀವನಾಂಶಕ್ಕೆ, ವೈದ್ಯಕೀಯ ಖರ್ಚು ವೆಚ್ಚ ಹಾಗೂ ವಸತಿ ಮತ್ತು ಬಟ್ಟೆಗಳಿಗೆ ಹಾಗೂ 2 ನೇ ಅರ್ಜಿದಾರನ ವಿದ್ಯಾಭ್ಯಾಸಕ್ಕೆ ಒಟ್ಟಾಗಿ ತಿಂಗಳಿಗೆ 20 ರಿಂದ 25 ಸಾವಿರ ರೂ. ಬೇಕಾಗುತ್ತದೆ. ಎದುರುದಾರನಿಗೆ ನಮ್ಮನ್ನು ಸಾಕುವಷ್ಟು ಆರ್ಥಿಕ ಹಾಗೂ ದೈಹಿಕ ಸಾಮರ್ಥ ಇರುತ್ತದೆ. ಆದ್ದರಿಂದ ಅರ್ಜಿಯಲ್ಲಿ ಕೋರಿರುವಂತೆ ಪರಿಹಾರ ನೀಡಲು ಪ್ರಾರ್ಥನೆ.

ವಿವಾಹ ಆಮಂತ್ರಣ ಪ್ರತಿಕೆಯನ್ನು ನಿಪಿ.1 ಮತ್ತು 1(ಎ) ಎಂದು, ಫೋಟೋಗಳನ್ನು ನಿಪಿ.2 ರಿಂದ 7 ಎಂದು, ಕಾನೂನು ತಿಳುವಳಿಕೆ ನೋಟಿಸನ್ನು ನಿಪಿ.8 ಎಂದು, ಅಂಚೆ ರಸೀದಿಗಳನ್ನು ನಿಪಿ.9 ರಿಂದ 11 ಎಂದು, 2 ನೇ ಅರ್ಜಿದಾರನ ಜನನ ಪ್ರಮಾಣ ಪತ್ರವನ್ನು ನಿಪಿ.12 ಎಂದು ಗುರುತಿಸಲಾಯಿತು.

**ಅರ್ಜಿದಾರರ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ**
**ನ್ಯಾಯಾಧೀಶರು ಕೆ.ಆರ್.ನಗರ**